ಓ. ಎಸ್ .   58/2018                                   ಡಿ .ಡಬ್ಲ್ಯೂ  - 1   ವಂದನಾ ಗಡಕರಿ

( ದಿನಾಂಕ  22-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ವಾಟೀಸವಾಲು  : ವಾದಿ ಪರ  ಶ್ರೀ. ಡಿ ಆಯ ಎ     ವಕೀಲರಿಂದ  -**

ನಾನು  ಗೃಹಿಣಿ ಆಗಿದ್ದೇನೆ.  ನಾನು 6 ನೇ ತರಗತಿಯವರೆಗೆ  ಮರಾಠಿ ಮಾಧ್ಯಮದಲ್ಲಿ ಶಾಲೆ ಕಲಿತಿದ್ದ್ಮೇನೆ.  ಇದುವರೆಗೂ  ಪಾಲು ಆಗಿಲ್ಲ ಎಂದು  ವಾದಿಯರು ಕೇಸ ಹಾಕಿದ್ದಾರೆ.  ದಾವಾ ಸ್ವತ್ತಿನ ಸರ್ವೇ ನಂಬರ ನನಗೆ ಗೊತ್ತಿಲ್ಲ. ನಮ್ಮ ವಕೀಲರಿಗೆ ಗೊತ್ತಿರುತ್ತದೆ. ನನಗೂ  ಮತ್ತು  ನನ್ನ ಅಕ್ಕನಿಗೆ 12 ಗುಂಟೆ ಬರುತ್ತದೆ. 1 ಎಕರೆ 37 ಗುಂಟೆ ಯ ಚಕಬಂದಿ ನನಗೆ ಹೇಳಲು ಬರುವುದಿಲ್ಲ, ನಮ್ಮ ವಕೀಲರಿಗೆ ಗೊತ್ತಿರುತ್ತದೆ.  ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ನಿಜ. ನಮ್ಮ ಅಜ್ಜನ  ಹೆಸರು ಲಗಮಪ್ಪ. ನನ್ನ ಅಜ್ಜಿಯ ಹೆಸರು  ನನಗೆ ನೆನಪಿಲ್ಲ.

2.  ನನ್ನ ಅಜ್ಜನಿಗೆ 6 ಜನ ಮಕ್ಕಳು. ಲಗಮಣ್ಣನಿಗೆ 1. ಹೊಳೆಪ್ಪ, 2. ಲಕ್ಕವ್ವಾ  3. ಲಕ್ಕಪ್ಪ4. ಲಕ್ಷ್ಮಿಬಾಯಿ 5. ಶಿವುತಾಯಿ 6. ಬಾಳಪ್ಪ ಎಂಬ  ಮಕ್ಕಳು ಎಂದರೆ ನಿಜ.  ಲಗಮವ್ವ  ಮತ್ತು ಕಾಡಪ್ಪ  ಹೊಳೆಪ್ಪನ ಮಕ್ಕಳು ಎಂದರೆ ನಿಜ. ಮಲಕೂರಿ  ಮತ್ತು ಕಲ್ಲವ್ವ  ಲಕ್ಕವ್ವ ಮಕ್ಕಳು ಎಂದರೆ ಎಂದರೆ ನಿಜ.

3. ನಾನು ಮತ್ತು  ನನ್ನ  ಅಕ್ಕ ಇಂದ್ರಾವತಿ ಲಕ್ಕಪ್ಪನ ಮಕ್ಕಳು ಎಂದರೆ ನಿಜ.  ಲಕ್ಕಪ್ಪ ಈಗ ತೀರಿಕೊಂಡಿದ್ದಾರೆ ಎಂದರೆ ನಿಜ. ಹೊಳೆಪ್ಪ, ಲಕ್ಕವ್ವ ಮತ್ತು ಲಕ್ಕಪ್ಪ ಮತ್ತು ಲಕ್ಷ್ಮಿಬಾಯಿ ತೀರಿಕೊಂಡಿದ್ದಾರೆ ಎಂದರೆ ನಿಜ.

4. ಲಕ್ಷ್ಮಿಬಾಯಿ  ಮಗಳು ಲಕ್ಕವ್ವಾ, ಮಗ ಭರಮಾ ಹಾಗೂ  ಮಗಳು ನೀಲವ್ವ ಎಂದರೆ ನಿಜ. ಶಿವುತಾಯಿ ಈಗ ತೀರಿಕೊಂಡಿದ್ದಾಳೆ. ಬಾಳಪ್ಪ  ಸಹ ತೀರಿಕೊಂಡಿದ್ದಾರೆ.  ಅವರ ಮಕ್ಕಳು  ಲಕ್ಷ್ಮಣ, ಲಕ್ಕವ್ವಾ ಮತ್ತು ಪಾರ್ವತಿ.

5.    ಸರ್ವೆ ನಂ.  149  ರಲ್ಲಿ 1 ಎಕರೆ 37 ಗುಂಟೆ  ನನ್ನ ಅಜ್ಜ ಇದ್ದಾಗ ಒಟ್ಟು ಕುಟುಂಬದ ಆಸ್ತಿ ಇತ್ತು ಎಂದರೆ ನಿಜ.   ದಾವಾ ಆಸ್ತಿಯಲ್ಲ್ಲಿ  ವಾಟ್ನಿ  ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಇದ್ದಾಗ  ಅಜ್ಜ ವಾಟ್ನಿ ಮಾಡಿ ಕೊಟ್ಟಿದ್ದಾರೆ.  ಆ ವಾಟ್ನಿ ಪತ್ರ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ.

ದಾವಾ ಆಸ್ತಿಯಲ್ಲಿ ವಾದಿಯರಿಗೆ 1/6 ಪಾಲು ಇದೆ ಎಂದರೆ ಈ ಹಿಂದೆಯೇ ಪಾಲು ಆಗಿದೆ ಎಂದು ಹೇಳುತ್ತಾರೆ. ಬಾಳಪ್ಪ 22-10-2017 ರಂದು ಪಾಲು ಮಾಡಿಕೊಡಲು ಕೇಳಿದಾಗ ನಾವು ಒಪ್ಪಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಾವು ಸಣ್ಣವರಿದ್ದಾಗಲೇ ನನ್ನ ಕಾಕ ಮತ್ತು ನನ್ನ ಅಪ್ಪ ನಮ್ಮ ಪಾಲನ್ನು ಪ್ರತ್ಯೇಕವಾಗಿ ಸಾಗು ಮಾಡಿಕೊಳ್ಳುತ್ತಾ ಬಂದಿದ್ದಾರೆ. ನಿಡಿ.1 ರಿಂದ 3 ಫೋಟೋದಲ್ಲಿರುವ ಸದರಿ ಜಮೀನು ಪಾಳು ಬಿದ್ದಿದೆ ಎಂದರೆ ನಿಜ. ಸಾಕ್ಷಿ ನಾವು ಮಾರಿದ ನಂತರ ವಾದಿಯು ಖರೀದಿ ಮಾಡಿದವರಿಗೆ ಸಾಗು ಮಾಡಲು ಬಿಡುತ್ತಿಲ್ಲ ಎಂದು ಹೇಳುತ್ತಾರೆ. ತಲಾ 12 ಗುಂಟೆ ನಾವು ಅಕ್ಕತಂಗಿಯರು ವಾಟ್ನಿ ಮಾಡಿಕೊಂಡಿದ್ದೇವೆ. ವಾಟ್ನಿ ಆದಂತಹ ಕಾಗಪತ್ರಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೆವೆ. ನಾವು ಮಾರಾಟ ಮಾಡುವಾಗ 1 ಎಕರೆ 36 ಗುಂಟೆ ಒಟ್ಟಿಗೆ ಇತ್ತು ಪಾಲು ಆಗಿರಲಿಲ್ಲ ಎಂದರೆ ಸರಿಯಲ್ಲ. ಓ ಎಸ ನಂ..319/2017 ರಲ್ಲಿ ಬಾಳಪ್ಪ ಮತ್ತು ಆತನ ಅಕ್ಕಂದಿರು ಮತ್ತು ಅಣ್ಣಂದಿರನ್ನು ಪಾರ್ಟಿ ಮಾಡಿರಲಿಲ್ಲ, ಸಾಕ್ಷಿ ಅದು ನಮ್ಮ ಪಾಲಿಗೆ ಪ್ರತ್ಯೇಕವಾಗಿ ಬಂದಿತ್ತು ಹಾಗೂ ನಾವು ಅದನ್ನು ಮಾರಾಟ ಮಾಡಿದೆವೇ ಎಂದು ಹೇಳುತ್ತಾರೆ . ನಾವು ವಾದಿಯರಿಗೆ ತೊಂದರೆ ಕೊಡಬೇಕೆಂದು ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿದ್ದೆವೆ ಎಂದರೆ ಸರಿಯಲ್ಲ.

6. ಓ ಎಸ ನಂ. 318/2017 ರಲ್ಲಿ ಬಾಳಪ್ಪ ಮತ್ತು ಆತನ ಅಕ್ಕಂದಿರು ಮತ್ತು ಅಣ್ಣಂದಿರನ್ನು ಪಾರ್ಟಿ ಮಾಡಿರಲಿಲ್ಲ, ಸಾಕ್ಷಿ ಅದು ನಮ್ಮ ಪಾಲಿಗೆ ಪ್ರತ್ಯೇಕವಾಗಿ ಬಂದಿತ್ತು ಹಾಗೂ ನಾವು ಅದನ್ನು ಮಾರಾಟ ಮಾಡಿದ್ದೇವೆ ಎಂದು ಹೇಳುತ್ತಾರೆ. ಸಾಕ್ಷಿ ಆ ಸಮಯದಲ್ಲಿ ನಮ್ಮ ಅಕ್ಕ ಸಿರಿಯಸ ಆಗಿದ್ದಳು ನಮಗೆ ಹಣ ಬೇಕಾಗಿತ್ತು ಆಗ ನಾವು ಮಾರಾಟ ಮಾಡಿದ್ದಾಗಿ ಹೇಳುತ್ತಾರೆ. ಕೊರ್ಟ ಡಿಕ್ರಿ ಆದ ನಂತರ ನಾವು ಮಾರಾಟ ಮಾಡಿದ್ದೆವೆ ಎಂದರೆ ನಿಜ. ಡೈರಿ ನಂ. 24 ಮತ್ತು 25 /20 17-18 ರ ವಿರುದ್ದ ವಾದಿ ಅಪೀಲ ಮಾಡಿದ್ದರು ಎಂದರೆ ನಿಜ. ಹಾಗೂ ಎ ಸಿ ನ್ಯಾಯಾಲಯದಲ್ಲಿ ಹಾಜರು ಆಗಿರಲಿಲ್ಲ. ನಮ್ಮ ವಿರುದ್ದ ವಾದಿ ಎ ಸಿ ನ್ಯಾಯಾಲಯದಲ್ಲಿ ಅಪೀಲ ಹಾಕಿದ್ದ ಎಂದರೆ ಸರಿಯಲ್ಲ. ಆರ ಟಿ ಎಸ ಅಪೀಲ ನಂ. 126/2018 ಹಾಗೂ 127/2019 ರ ತಿಳುವಳಿಕೆ ಪತ್ರದ ಪ್ರತಿಯನ್ನು ಈಗ ನೋಡುತ್ತಿದ್ದೆನೆ, ಆದರಲ್ಲಿ ನನ್ನ ಹೆಸರಿದೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ. 9 ಮತ್ತು 10 ಎಂದು ಗುರುತಿಸಲಾಯಿತು.

7. ನಾವು ಸಿ ಸಿ . 576/2015 ರಲ್ಲಿ ಬಾಳಪ್ಪ ಮತ್ತು ಲಕ್ಷ್ಮಣ ಇವರ ಮೇಲೆ ಯಮಕನಮರಡಿ ಪೊಲೀಸ ಠಾಣೆ ಯಲ್ಲಿ ಕೇಸ ಮಾಡಿದ್ದೆವೆ ಎಂದರೆ ನಿಜ. ಅದರಲ್ಲಿ ನಾನು ಸಾಕ್ಷಿ ಹೇಳಿದ್ದೆ, ಅದು ವಿಚಾರಣೆ ಯಾಗಿ ಬಿಡುಗಡೆ ಆಗಿದೆ ಎಂದರೆ ನಿಜ.

**(ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ